# ಕನ್ನಡ ಕಾವ್ಯ ಕಾಮನಬಿಲ್ಲು

# ರಾಗಾಲಾಪಕ್ಕೆ ಕಾವ್ಯದ ಸೊಲ್ಲು



ಕನ್ನಡ ಸಾಹಿತ್ಯ ಹಾಗೂ ಶಾಸ್ತ್ರೀಯ ಸಂಗೀತವನ್ನು ಒಂದಕ್ಕೊಂದು ಬೆಸೆಯುವ, ಸಂಗೀತದ ಮೂಲಕ ಕನ್ನಡ ಸಾಹಿತ್ಯ ಶ್ರೀಮಂತಿಕೆಯನ್ನು ಪ್ರಸ್ತುತಪಡಿಸುವ ವಿಭಿನ್ನ ಪ್ರಯತ್ನ 'ಕನ್ನಡ ಕಾವ್ಯ ಕಾಮನಬಿಲ್ಲು'. ಸಾಹಿತ್ಯಪ್ರಿಯರಿಗೆ ಹಾಗೂ ಶಾಸ್ತ್ರೀಯ ಸಂಗೀತಾಭಿಮಾನಿಗಳಿಗೆ ಭಿನ್ನ ಅನುಭವ ನೀಡುವ ಈ ಸರಣಿಯ ಎರಡನೇ ಭಾಗ ಸದ್ಯ ಯೂಟ್ಯೂಬ್‌ನಲ್ಲಿ ಪ್ರಸಾರವಾಗುತ್ತಿದೆ.

■ ಸುಮಲತಾ ಎನ್.

ಮಳೆ–ಬಿಸಿಲು ಸೇರಿದಾಗ ಕಾಮನಬಿಲ್ಲು ಮೂಡುವುದು. ಹಾಗೆಯೇ ಸಾಹಿತ್ಯ ಮತ್ತು ಸಂಗೀತ ಸೇರಿದಾಗ ರಸಾಸ್ವಾದನೆಯ ಪಾಕ. ಕಾವ್ಯ ಇರುವುದು ವಾಚನಕ್ಕೆ, ಸಂಗೀತ ಇರುವುದು ಗಾಯನಕ್ಕೆ ಎಂಬುದು ಜನಪ್ರಿಯ ಗ್ರಹಿಕೆ. ಇವೆರಡನ್ನೂ ಸೇರಿಸುವ ಮೂಲಕ ಹೊಸ ಬಣ್ಣಗಳ ಅನುಭವ ಕಟ್ಟಿಕೊಡುವ ಪ್ರಯತ್ನವನ್ನು 'ಕನ್ನಡ ಕಾವ್ಯ ಕಾಮನಬಿಲ್ಲು' ಮಾಡುತ್ತಿದೆ.

## ಏನಿದು ಕಾವ್ಯ ಕಾಮನಬಿಲ್ಲು?

ಕನ್ನಡ ಕಾವ್ಯಗಳಿಗೆ ಸ್ವರ ಸ್ವಾದ ತುಂಬುವ, ದೃಶ್ಯ–ಶ್ರವ್ಯ ಯೋಜನೆಯೇ 'ಕನ್ನಡ ಕಾವ್ಯ ಕಾಮನಬಿಲ್ಲು'. 2020ರಲ್ಲಿ ಸಾಹಿತಿ ಹಾಗೂ ವಿಮರ್ಶಕ ಸಿ.ಎನ್. ರಾಮಚಂದ್ರನ್ ಅವರ ಪರಿಕಲ್ಪನೆ ಹಾಗೂ ನಿರೂಪಣೆಯಲ್ಲಿ ರೂಪುಗೊಂಡ ಈ ಯೋಜನೆಗೆ ಅವರ ಮೊಮ್ಮಕ್ಕಳಾದ, ವಿದುಷಿ ಕೃತಿಕಾ ಶ್ರೀನಿವಾಸನ್ ಹಾಗೂ ದೀಪಿಕಾ ಶ್ರೀನಿವಾಸನ್ ಗಾಯನ–ವಾದನದ ಗಂಧ ತುಂಬುತ್ತಿದ್ದಾರೆ.

ಕಾವ್ಯ ಪ್ರಕಾರದ ವಿವರಣೆಯ ಜೊತೆಜೊತೆಗೆ ಗಾನಸುಧೆಯ ಮೊದಲನೇ ಸರಣಿಯ ಹದಿನಾಲ್ಕು ಕಂತುಗಳು ಈಗಾಗಲೇ ಮೆಚ್ಚುಗೆ ಗಳಿಸಿಕೊಂಡಿವೆ. ಸದ್ಯ ಈ ಸರಣಿಯ ಎರಡನೇ ಭಾಗದ ವಿಡಿಯೊಗಳು ಯೂಟ್ಯೂಬ್‌ನಲ್ಲಿ ಪ್ರಸಾರಗೊಳ್ಳುತ್ತಿವೆ.



ಸಿ.ಎನ್. ರಾಮಚಂದ್ರನ್

## ಪ್ರಾಚೀನ ಸಾಹಿತ್ಯಕ್ಕೆ ಸಂಗೀತ ಸ್ಪರ್ಶ

ಆದಿಕವಿ ಪಂಪನಿಂದ ಹಿಡಿದು ಡಿ.ವಿ. ಗುಂಡಪ್ಪ, ಪು.ತಿ. ನರಸಿಂಹಾಚಾರ್ ಅವರ ಕಾಲಘಟ್ಟದವರೆಗಿನ ಕಾವ್ಯಗಳನ್ನು ಒಳಗೊಳ್ಳಲಾಗಿದೆ. ಕನ್ನಡ ಸಾಹಿತ್ಯ ಪರಂಪರೆ, ಭಿನ್ನ ಕಾಲಘಟ್ಟಗಳಲ್ಲಿನ ಕಾವ್ಯಗಳನ್ನು ಸಂಗೀತಕ್ಕೆ ಒಗ್ಗಿಸುವ ಪ್ರಯತ್ನದಂತಿರುವ ಈ ಯೋಜನೆಯಲ್ಲಿ ಮುಖ್ಯವಾಗಿ ಮೂರು ಸರಣಿಗಳಿವೆ.

ಮೊದಲನೇ ಸರಣಿ 'ಕನ್ನಡ ಕಾವ್ಯದ ಛಂದೋರೂಪಗಳು', ಎರಡನೇ ಸರಣಿ 'ಕನ್ನಡ ಕಾವ್ಯದ ಅಲಂಕಾರಗಳು' ಹಾಗೂ ಮೂರನೇ ಸರಣಿಯನ್ನು 'ಕನ್ನಡ ಕಾವ್ಯದಲ್ಲಿ ಶಿಲ್ಪ ಮತ್ತು ಬಂಧ' ಎಂದು ವಿಂಗಡಿಸಲಾಗಿದೆ. 2020ರಲ್ಲಿ ಮೊದಲನೇ ಸರಣಿಯ ವಿಡಿಯೊಗಳು ಬಿಡುಗಡೆಯಾಗಿವೆ. ಕನ್ನಡ ಕಾವ್ಯ ಅಭಿವ್ಯಕ್ತಗೊಳಿಸಿದ ಛಂದೋರೂಪಗಳನ್ನು ವ್ಯಾಖ್ಯಾನ ಗಾಯನದ ಮೂಲಕ ಕಟ್ಟಿಕೊಡಲಾಗಿದೆ.

ಪಂಪನ ಎರಡು ಪದ್ಯಗಳು, ವಚನಗಳು, ಹರಿಹರನ ಪುಷ್ಪರಗಳೆ, ಕುಮಾರವ್ಯಾಸ, ಲಕ್ಷ್ಮೀಶರ ಪದ್ಯಗಳು, ಜನ್ನನ ಯಶೋಧರ ಚರಿತೆಯ ಮೂರು ಕಂದ ಪದ್ಯಗಳನ್ನು ಈ ಭಾಗ ಒಳಗೊಂಡಿದ್ದು, ವಾರಕ್ಕೆ ಒಂದರಂತೆ ಹದಿನಾಲ್ಕು ಕಂತುಗಳಲ್ಲಿ ಪ್ರಸಾರ ಕಂಡಿದೆ. ಸಾಂಗತ್ಯ ಪ್ರಕಾರದಲ್ಲಿ ಸಂಚಿ ಹೊನ್ನಮ್ಮನ ಹದಿಬದೆಯ ಧರ್ಮದ ಪದ್ಯಗಳ ಪ್ರಸ್ತುತಿ, ಸರ್ವಜ್ಞನ ತ್ರಿಪದಿಗಳು, ಶಿವಯೋಗಿಗಳ ತತ್ವಪದಗಳನ್ನು, ಸುಳಾದಿ ಪ್ರಕಾರದಲ್ಲಿ ದಾಸರ ಪದಗಳನ್ನು ಹಾಡಿರುವುದು ಇವರ ಭಿನ್ನ ಪ್ರಯತ್ನಕ್ಕೆ ಹಿಡಿದ ಕನ್ನಡಿ.

## ಸಂಗೀತಕ್ಕೆ ಬೇಕು ಅಲಂಕಾರ

ಕನ್ನಡ ಕಾವ್ಯ ಕಾಮನಬಿಲ್ಲಿನ ಎರಡನೇ ಸರಣಿಯಲ್ಲಿ 'ಕನ್ನಡ ಕಾವ್ಯದ ಅಲಂಕಾರಗಳು' ಪರಿಚಿತಗೊಳ್ಳುತ್ತಿವೆ. ಕನ್ನಡಪರ ಕಾರ್ಯದಲ್ಲಿ ತೊಡಗಿಕೊಂಡಿರುವ 'ಅವಿರತ ಪ್ರತಿಷ್ಠಾನ' ಎರಡನೇ ಸರಣಿಗೆ ಕೈಜೋಡಿಸಿದೆ.

'ಯಾವುದೇ ಭಾಷೆಯಲ್ಲಿಯೂ ಅಲಂಕಾರಗಳಿಲ್ಲದೆ ಯಾವ ಕಾವ್ಯವೂ ಅಲ್ಲ. ಒಂದು ಹೇಳಿಕೆ ರೋಚಕವಾಗಿರಬೇಕು ಎಂಬುದು ಎಲ್ಲಾ ಕವಿಗಳ ಆಸೆ. ಆ ಕಾರಣದಿಂದ ಅಲಂಕಾರಗಳನ್ನು ಎಲ್ಲಾ ಭಾಷೆಗಳ ಕಾವ್ಯಗಳಲ್ಲಿಯೂ ಉಪಯೋಗಿಸಲಾಗುತ್ತದೆ. ಶಬ್ದಾಲಂಕಾರ ಹಾಗೂ ಅರ್ಥಾಲಂಕಾರ ಪ್ರಮುಖವಾಗಿದ್ದು, ಅಲಂಕಾರಗಳ ಸ್ವರೂಪಗಳನ್ನು ನಿದರ್ಶಿಸಲು ಮಧ್ಯಕಾಲೀನ ಕನ್ನಡ ಕವಿಗಳ ಕಾವ್ಯಗಳನ್ನು ಆರಿಸಿಕೊಳ್ಳಲಾಗಿದೆ. ಕಾವ್ಯದಲ್ಲಿ